## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/2019 |

| | | |
|---|---|---|
| ಸಾಕ್ಷಿದಾರರ ಹೆಸರು | ಡಾಃ ಸ್ಮಿತಾ | |
| ಗಂಡನ ಹೆಸರು | **ಶಿವಮೂರ್ತಿ ಎಸ್** | ಸಾಕ್ಷಿಗೆ ದಿಃ **06.09.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **44** ವರ್ಷ | |
| ಉದ್ಯೋಗ | **Senior Scientific Office at RFSL Mysuru** | ಪಿ.ಡಬ್ಲ್ಯೂ **-13** |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ **-22** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕಃ 16.08.2019 ನಮ್ಮ ಕಛೇರಿಯವರು 5 ಶೀಲ್ಡ್ ಆರ್ಟಿಕಲ್ ಗಳನ್ನು ನಜರಾಬಾದ್ ಪೊಲೀಸ ಠಾಣೆಯ ಕ್ರೆಂ ನಂಬರ್ 108/2019 ಸಂಬಂಧಪಟ್ಟಂತೆ ಪೊಲೀಸ್ ಪೇದೆ 1246 ರವರಿಂದ ಪಡೆದುಕೊಂಡು ಸದರಿ ಆರ್ಟಿಕಲ್ ಗಳನ್ನು ನಮ್ಮ ಕಛೇರಿ ಸಂಖ್ಯೆ BS 748/2019 ನಲ್ಲಿ ನೊಂದಯಿಸಿಕೊಂಡು ಆಸಿಸ್ಟಂಟ್ ಡೈರಕ್ಟರ್ ರವರು ರಾಸಾಯನಿಕ ಪರೀಕ್ಷೆಗಾಗಿ ನನಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಸದರಿ ಆರ್ಟಿಕಲ್ ಗಳನ್ನು ಪಡೆದುಕೊಂಡಾಗ ಸೀಲ್ ಸುಸ್ಥಿತಿಯಲ್ಲಿದ್ದು ಮಾದರಿ ಸೀಲ್ ನೊಂದಿಗೆ ಹೋಲಿಕೆ ಆಗುತ್ತಿತ್ತು. ಸದರಿ ಸೀಲ್ ಆದ ವಸ್ತುಗಳನ್ನು ತೆಗೆದು ನೋಡಿದಾಗ ವಸ್ತು ಸಂಖ್ಯೆ 1. ಸ್ವಾಬ್. ವಸ್ತು ಸಂಖ್ಯೆ 2. ಒಂದು ಚಾಕು. ವಸ್ತು ಸಂಖ್ಯೆ 7. ಚೂಡಿದಾರ್ ಟಾಪ್. ವಸ್ತು ಸಂಖ್ಯೆ 8. ಚೂಡಿದಾರ್ ಪ್ಯಾಂಟ್ . ವಸ್ತು ಸಂಖ್ಯೆ 9. ಬ್ರಾ. ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ 1,2,7,8 ಮತ್ತು 9 ರಕ್ತದ ಕಲೆಗಳು ಕಂಡು ಬಂದಿರುತ್ತವೆ. ಅವು ಮನುಷ್ಯನ ರಕ್ತದ ಕಲೆಗಳು ಇರುತ್ತವೆ. ಅವು ಮನುಷ್ಯನ ಒ ಗುಂಪಿಗೆ ಸೇರಿದ ರಕ್ತದ ಕಲೆಗಳು ಇರುತ್ತವೆ. ಅದಕ್ಕೆ ಸಂಬಂಧಪಟ್ಟಂತೆ ನಾನು ವರದಿಯನ್ನು ಕೊಟ್ಟಿರುತ್ತೇನೆ. ವರದಿಯನ್ನು ನಿ.ಪಿ 14 ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ

ಸಹಿಯನ್ನು ನಿ.ಪಿ 14(ಎ) ಎಂದು ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಯಾದ ನಂತರ ಎಲ್ಲಾ ವಸ್ತುಗಳನ್ನು ಸೀಲ್ ಮಾಡಿ ಸ್ಯಾಂಪಲ್ ಸೀಲ್ ನೊಂದಿಗೆ ಸಂಬಂಧಪಟ್ಟ ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಮುದ್ದೆ ಮಾಲುಗಳನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 5 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು :- ಆರೋಪಿ ಪರ ವಕೀಲರಾದ ಎಮ್.ಎಸ್ ವಕೀಲರಿಂದಃ-</u>**

ಚಾಕುವಿನ ಹ್ಯಾಂಡಲ್ ಮತ್ತು ಬ್ಲೇಡ್ ಮೇಲೆ ರಕ್ತದ ಕಲೆಗಳು ಇದ್ದವು. ರಕ್ತದ ಕಲೆಗಳು ವಸ್ತುವಿನ ಮೇಲೆ ಸರಿಯಾಗಿ ಇಟ್ಟರೆ 3 ವರ್ಷಕ್ಕಿಂತ ಹೆಚ್ಚಿನ ಕಾಲ ರಕ್ತದ ಕಲೆಗಳು ಇರುತ್ತವೆ. ಚಾಕುವಿನ ಮೇಲೆ ನೀರು ಮತ್ತು ಸೂರ್ಯನ ಕಿರಣಗಳು ಬಿದ್ದರೆ ರಕ್ತದ ಕಲೆಯ ಗುಣಗಳು ಹೋಗುವ ಸಾಧ್ಯತೆ ಇರುತ್ತದೆ. ಚಾಕುವಿನ ಮೇಲೆ ನೀರು ಮತ್ತು ಸೂರ್ಯನ ಕಿರಣಗಳು ಬಿದ್ದು ರಕ್ತದ ಕಲೆಗಳು ಹೋದರೆ ರಕ್ತದ ವರ್ಗೀಕರಣ ಮಾಡಲು ಆಗುವುದಿಲ್ಲ. ಕಬ್ಬಿಣ ನೀರು ಮತ್ತು ಮಣ್ಣಿನಲ್ಲಿ ಬಿದ್ದರೆ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ. ನಾನು ಚಾಕುವನ್ನು ಪರೀಕ್ಷೆ ಮಾಡಿದಾಗ ಅದು ತುಕ್ಕು ಹಿಡಿದಿರಲಿಲ್ಲ. ರಕ್ತದ ವಯಸ್ಸನ್ನು ಗುರುತಿಸಲು ಯಾವುದೇ ಪದ್ಧತಿ ಇರುವುದಿಲ್ಲ. ಮು.ಮಾ-5 ಚಾಕುವಿನ ಮೇಲೆ ಯಾವುದೇ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು